# ಉದಯಿಸುತ್ತಿರುವ ತಾರೆ

ನಾವು–ನೀವಾದರೆ 34ರ ಹರೆಯದರಲ್ಲಿ ಹೆಚ್ಚೆಂದರೆ ಏನು ಮಾಡಿರಬಹುದು? ಓದು ಮುಗಿಸಿ, ಒಂದು ಕೆಲಸ ಹಿಡಿದು, ಜತೆಗೊಂದು ಮದುವೆಯೂ ಆಗಿರಬಹುದು; ಅಷ್ಟೇ ಅಲ್ಲವೇ? ಆದರೆ, ಫ್ರಾನ್ಸ್‌ನ ಈ ಹುಡುಗ ಆ ವಯಸ್ಸಿನಲ್ಲಿ ದೇಶದ ಪ್ರಧಾನಿ ಪಟ್ಟಕ್ಕೇರಿದ್ದಾರೆ! ಭಾರತದಲ್ಲಿ ಇಂಥದ್ದೊಂದು ವಿದ್ಯಮಾನವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಗ್ಯಾಬ್ರಿಯಲ್ ಅಟ್ಟಾಲ್, ಫ್ರಾನ್ಸ್‌ನಲ್ಲಿ ಅದನ್ನು ಸಾಧಿಸಿ ತೋರಿದ್ದಾರೆ. ನಮ್ಮಲ್ಲಿ ನಾಯಕರ ಹಿಂದೆ ಓಡಾಡುತ್ತಾ, ರ್‍ಯಾಲಿಗಳಿಗೆ ಬ್ಯಾನರ್ ಕಟ್ಟುವ ಕಾರ್ಯಕರ್ತನ ವಯಸ್ಸಿನ ಇವರು, ಪ್ರಧಾನಿ ಹುದ್ದೆಗೇರಿದ್ದೇನೂ ಸಣ್ಣ ಸಾಧನೆಯಲ್ಲ. ಆಡಳಿತ ಪಕ್ಷದಲ್ಲೂ ವಿರೋಧ ಪಕ್ಷಗಳಲ್ಲೂ ಅತ್ಯಂತ ಜನಪ್ರಿಯ ನಾಯಕನಾಗಿ ಹೊರಹೊಮ್ಮಿರುವ ಗ್ಯಾಬ್ರಿಯಲ್, ದೇಶದ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನಿ ಎನಿಸಿದ್ದಾರೆ.



■ ಪ್ರವೀಣ ಕುಲಕರ್ಣಿ

ಗ್ಯಾಬ್ರಿಯಲ್ ಅವರಿಗೆ ಇರುವ ಸಂವಹನ ಕಲೆ ಅಸಾಧಾರಣವಾದುದು. ಕೋವಿಡ್ ಕಾಲಘಟ್ಟದಲ್ಲಿ ಸರ್ಕಾರದ ನೀತಿ–ನಿಲುವುಗಳನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಮುಟ್ಟಿಸಿದ ಖ್ಯಾತಿ ಇವರದು. ಜನಜಾಗೃತಿಗೆ ಗ್ಯಾಬ್ರಿಯಲ್ ಅವರು ತೋರಿದ ಮುತುವರ್ಜಿಯಿಂದಾಗಿ ಆ ದೇಶದಲ್ಲಿ ಹೆಚ್ಚಿನ ಅನಾಹುತವನ್ನು ತಡೆಗಟ್ಟಲು ಸಾಧ್ಯವಾಯಿತು ಎಂದೂ ವಿಶ್ಲೇಷಿಸಲಾಗುತ್ತದೆ. ಗ್ಯಾಬ್ರಿಯಲ್‌ಗಿಂತ ಮೊದಲು ಪ್ರಧಾನಿಯಾಗಿದ್ದವರು ಎಲಿಜಬೆತ್ ಬೋರ್ನ್. ಅವರ ಸರ್ಕಾರದ ಅತ್ಯಂತ ಜನಪ್ರಿಯ ಮತ್ತು ಪ್ರಭಾವೀ ಸಚಿವ ಎಂಬ ಹಿರಿಮೆಯೂ ಗ್ಯಾಬ್ರಿಯಲ್ ಅವರದ್ದಾಗಿತ್ತು. ಅಲ್ಲಿನ ನಾಗರಿಕರು ಅವರ ಮಾತನ್ನು ರೇಡಿಯೊದಲ್ಲಿ ಮೇಲಿಂದ ಮೇಲೆ ಕೇಳಿಸಿಕೊಳ್ಳಬಹುದಿತ್ತು. ಮೊದಲು ಯುವ ಇಲಾಖೆಯ ಕಾರ್ಯದರ್ಶಿಯಾಗಿದ್ದ ಅವರು, ಬಳಿಕ ಸರ್ಕಾರದ ವಕ್ತಾರರಾಗಿ, ಹಣಕಾಸು ಸಚಿವರಾಗಿ ಕೆಲಸ ಮಾಡಿದರು. ಪ್ರಧಾನಿಯಾಗಿ ನೇಮಕಗೊಳ್ಳುವ ಮೊದಲು ಅವರು ಶಿಕ್ಷಣ ಸಚಿವರಾಗಿದ್ದರು. ಮೂಲತಃ ಎಡಪಂಥೀಯ ನಾಯಕನಾದ ಅವರು, ಧರ್ಮವನ್ನು ಪ್ರತಿಬಿಂಬಿಸುವ ದಿರಿಸುಗಳ ಮೇಲೆ ನಿರ್ಬಂಧ ಹೇರುವ ನಿರ್ಧಾರವನ್ನೂ ಕೈಗೊಂಡಿದ್ದರು. ಎಷ್ಟೇ ಪ್ರತಿರೋಧ ಬಂದರೂ ತಮ್ಮ ನಿರ್ಧಾರದಿಂದ ಹಿಂದೆ ಸರಿದಿರಲಿಲ್ಲ.

ಗ್ಯಾಬ್ರಿಯಲ್ ಅವರು ತುಂಬಾ ಪ್ರತಿಷ್ಠಿತ ಕುಟುಂಬದಿಂದ ಬಂದವರು. ಆದರೆ, ರಾಜಕಾರಣ ಪ್ರವೇಶಿಸಿದ ಮೇಲೆ ಸಮಾಜವಾದದ ಹಾದಿ ಹಿಡಿದವರು. ಫ್ರಾನ್ಸ್‌ನ ಸಾಮಾನ್ಯ ಮಕ್ಕಳಂತೆ ಅವರು ಸರ್ಕಾರಿ ಶಾಲೆಯಲ್ಲಿ ಓದಿದವರಲ್ಲ. ಖಾಸಗಿ ಶಾಲೆಯಲ್ಲಿ ಅಧ್ಯಯನ ನಡೆಸಿದವರು. ಅಲ್ಲದೆ, ಅವರ ಮನೆತನಕ್ಕೆ ಪರ್ಷಿಯನ್ ಹಿನ್ನೆಲೆಯೂ ಇದೆ. ಇದನ್ನೆಲ್ಲ ಉಲ್ಲೇಖಿಸಿ ನೈಜ ಫ್ರಾನ್ಸ್‌ನ ಅರಿವಿಲ್ಲದ ನಾಯಕ ಎಂದು ಅವರನ್ನು ಟೀಕಿಸುವವರೂ ಇದ್ದಾರೆ. ತಾವೊಬ್ಬ ಸಲಿಂಗಕಾಮಿ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಂಡಿರುವ ಈ ನಾಯಕ, ಟೀಕೆಗಳನ್ನೆಲ್ಲ ಮೆಟ್ಟಿ ನಿಲ್ಲುವ ಧಾಡಸಿ ಮನೋಭಾವ ಹೊಂದಿದವರು. ಫ್ರಾನ್ಸ್‌ನ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರ ‘ಪ್ರೀತಿಯ ಹುಡುಗ’ ಎಂದೇ ರಾಜಕೀಯ ವಲಯದಲ್ಲಿ ಖ್ಯಾತಿ ಗಳಿಸಿರುವ ಗ್ಯಾಬ್ರಿಯಲ್, ಭವಿಷ್ಯದಲ್ಲಿ ಇನ್ನೂ ಎತ್ತರಕ್ಕೆ ಬೆಳೆಯುವ ಎಲ್ಲ ಅವಕಾಶಗಳನ್ನೂ ಹೊಂದಿದ್ದಾರೆ.

‘ನಿಮ್ಮ ಶಕ್ತಿ, ಶ್ರಮ ಮತ್ತು ಸಮರ್ಪಣಾಭಾವ ಎಂತಹದ್ದು ಎನ್ನುವುದು ನನಗೆ ಗೊತ್ತು’ ಎಂದು ನೂತನ ಪ್ರಧಾನಿಯನ್ನು ಅಭಿನಂದಿಸುವಾಗ ಮ್ಯಾಕ್ರನ್ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಫ್ರಾನ್ಸ್‌ನ ಪ್ರಧಾನಿ ಹುದ್ದೆ ಎಂದರೆ ಭಾರತದಂತೆ ಅಲ್ಲ. ಅಲ್ಲಿ ಅಧ್ಯಕ್ಷರೇ ಪವರ್‌ಫುಲ್. ಪ್ರಮುಖ ತೀರ್ಮಾನಗಳನ್ನೆಲ್ಲ ಅಧ್ಯಕ್ಷರೇ ತೆಗೆದುಕೊಳ್ಳುತ್ತಾರೆ. ಸಂಸತ್ತು ಅಂಗೀಕರಿಸಿದ ರಾಷ್ಟ್ರೀಯ ನೀತಿಗಳನ್ನು ಅನುಷ್ಠಾನಗೊಳಿಸುವ ಹೊಣೆ ಮಾತ್ರ ಪ್ರಧಾನಿ ಅವರದ್ದಾಗಿರುತ್ತದೆ. ಸಚಿವರ ಜತೆ ಸಮನ್ವಯ ಸಾಧಿಸುವುದು ಅವರ ಮತ್ತೊಂದು ಹೊಣೆಗಾರಿಕೆ. ಮ್ಯಾಕ್ರನ್ ಅವರೇನೋ 2022ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಆದರೆ, ಸಂಸತ್ತಿನಲ್ಲಿ ಅವರಿಗೀಗ ಬಹುಮತ ಉಳಿದಿಲ್ಲ. ಇಂತಹ ನಾಜೂಕಿನ ಸ್ಥಿತಿಯಲ್ಲಿ ಸಂಸದರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ನಡೆಗಳಿಗೆ ಬೆಂಬಲ ಪಡೆಯುವ ಗುರುತರ ಹೊಣೆ ಈ ಚಿಕ್ಕವಯಸ್ಸಿನ ನಾಯಕನ ಮೇಲಿದೆ.

ನಾಯಕರ ಜನಪ್ರಿಯತೆ ಕುರಿತು ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಗ್ಯಾಬ್ರಿಯಲ್ ಅವರಿಗೆ ಹೆಚ್ಚಿನ ಬೆಂಬಲ ಇರುವುದು ಎದ್ದು ಕಂಡಿದೆ. ಸಂಪುಟದಲ್ಲಿ ದೊಡ್ಡ ದೊಡ್ಡ ನಾಯಕರಿದ್ದರೂ ಮ್ಯಾಕ್ರನ್ ಅವರು, ಈ ಯುವ ನಾಯಕನನ್ನೇ ಆಯ್ಕೆ ಮಾಡಿಕೊಂಡಿದ್ದರ ಹಿನ್ನೆಲೆಯಲ್ಲಿ ಈ ಸಮೀಕ್ಷೆಯೂ ಕೆಲಸ ಮಾಡಿದೆ. ‘ಪ್ರಧಾನಿ ಹುದ್ದೆ ದಿಢೀರ್ ಯಶಸ್ಸು ಎಂಬುದೇನೋ ಹೌದು. ಆದರೆ, ನೇಮಕವನ್ನು ಸಮರ್ಥಿಸಿಕೊಳ್ಳುವಂತೆ ಕೆಲಸ ಮಾಡುವ ಸವಾಲು ಕೂಡ ಮುಂದಿದೆಯಲ್ಲ’ ಎಂದು ರಾಜಕೀಯ ವಿರೋಧಿಗಳು ಅವರ ಕಾಲೆಳೆದಿದ್ದಾರೆ. ಆದರೆ, ಗ್ಯಾಬ್ರಿಯಲ್ ಎಂತಹ ಚಾಣಾಕ್ಷ ರಾಜಕಾರಣಿ ಎಂದರೆ ವಿರೋಧಿಗಳ ಇಂತಹ ಮಾತಿನಲ್ಲಿ ತಮಗಿರುವ ಪಾಠ ಹುಡುಕಿ, ಕಲಿತ ಪಾಠವನ್ನು ಮತ್ತೊಂದು ಯಶಸ್ಸಿನ ಮೆಟ್ಟಿಲನ್ನಾಗಿ ಮಾಡಿಕೊಂಡು ಅವರು ಮುಂದೆ ಸಾಗುತ್ತಾರೆ. ಪ್ರಾಯಶಃ ಅವರ ಯಶಸ್ಸಿನ ಗುಟ್ಟು ಇದೇ ಆಗಿರಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65